# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಐ. ಸಿ. ಎ. ಆರ್.- ಕೃಷಿ ವಿಜ್ಞಾನ ಕೇಂದ್ರ

ಹನುಮನಮಟ್ಟಿ - 581135 ಜಿ: ಹಾವೇರಿ

**ವಾರ್ತಾ ಪತ್ರ**

ಸಂಪುಟ: 13 | ಸಂಚಿಕೆ: 4 | ಆಕ್ಟೋಬರ-ಡಿಸೆಂಬರ-2015


## "ಬಾಳೆಯ ಕೃಷಿಯಲ್ಲಿ ಆಧುನಿಕ ತಾಂತ್ರಿಕತೆಗಳು" ಕುರಿತು ಕ್ಷೇತ್ರೋತ್ಸವ ಹಾಗು ವಿಚಾರ ಸಂಕಿರಣ





ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ, ನಬಾರ್ಡ,ಬೆಂಗಳೂರು ಹಾಗೂ ಎಂ.ಸಿ.ಎಫ್., ಹುಬ್ಬಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಒಂದು ದಿನದ ಬಾಳೆ ಕ್ಷೇತ್ರೋತ್ಸವ ಹಾಗೂ ವಿಚಾರ ಸಂಕಿರಣವನ್ನು 28.10.2015 ರಂದು ಶ್ರೀ. ಶಿದ್ಧಲಿಂಗೇಶ್ವರ ಕಲಿವಾಳ ಅವರ ಕ್ಷೇತ್ರದಲ್ಲಿ (ಇಬ್ರಾಹಿಂಪುರ ಗ್ರಾಮ ಶಿಗ್ಗಾಂವ ತಾಲೂಕ) ಹಮ್ಮಿಕೊಳ್ಳಲಾಗಿತ್ತು. ಕೃ.ಸಂ.ಕೇ.ದ ಪ್ರಧಾನ ವಿಜ್ಞಾನಿ ಹಾಗು ಮುಖ್ಯಸ್ಥರು ಡಾ. ಗಣಪತಿ ಟಿ. ಬಾಳೆ ಕೃಷಿಯಲ್ಲಿ ಆಧುನಿಕ ತಾಂತ್ರಿಕತೆಗಳ ಬಗ್ಗೆ ವಿವರಿಸಿದರು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕರಾದ ಡಾ. ಬಿ.ಎಸ್. ಜಾನಗೌಡರ, ವಿಸ್ತರಣಾ ನಿರ್ದೇಶಕರಾದ ಡಾ. ವ್ಹಿ.ಐ. ಬೆಣಗಿ, ಕೃಷಿ ಮಹಾವಿದ್ಯಾಲಯದ ಡೀನ್‌ರಾದ ಡಾ. ಆರ್.ಎ. ಬಾಳೆಕಾಯಿ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಕರಕಣ್ಣವರ ಹಾಗೂ ಇತರೆ ತಜ್ಞರು, ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ಹಾಗೂ 300 ಜನ ರೈತರು ಪಾಲ್ಗೊಂಡಿದ್ದರು. ಕೇಂದ್ರದಿಂದ ರೈತರಿಗೆ ಕೃಷಿ ಹಾಗೂ ಕೃಷಿ ಸಂಬಂಧಿತ ತಾಂತ್ರಜ್ಞಾನಗಳ ಕುರಿತು ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು.

## "ವಿಶ್ವ ಆಹಾರ ದಿನಾಚರಣೆ"





ಕೇಂದ್ರದಲ್ಲಿ ದಿನಾಂಕ 16.10.2015 ರಂದು "ವಿಶ್ವ ಆಹಾರ ದಿನಾಚರಣೆ" ಅಂಗವಾಗಿ ಒಂದು ದಿನದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೇಂದ್ರದ ಮುಖ್ಯಸ್ಥರಾದ ಹಾಗೂ ಆಹಾರ ಮತ್ತು ಪೋಷಣೆ ತಜ್ಞರಾದ ಡಾ. ಸರೋಜನಿ ಕರಕಣ್ಣನವರ ಆರೋಗ್ಯದಲ್ಲಿ ಪೌಷ್ಠಿಕ ಮತ್ತು ಸಮತೋಲನ ಆಹಾರದ ಪ್ರಾಮುಖ್ಯತೆ, ಸಿರಿ ಧಾನ್ಯಗಳ ಮಹತ್ವ ಮತ್ತು ಮೌಲ್ಯವರ್ಧನೆ ಬಗ್ಗೆ ವಿವರಿಸಿದರು. ತೋಟಗಾರಿಕೆ ವಿಜ್ಞಾನಿಗಳಾದ ಡಾ. ಅರ್ಚನಾ ಬಿ.  ಇವರು ಹಣ್ಣು ಮತ್ತು ತರಕಾರಿಗಳ ಮಹತ್ವದ ಬಗ್ಗೆ ವಿವರಿಸಿದರು. ಕಾರ್ಯಕ್ರಮದ ಅಂಗವಾಗಿ ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶನ ಮಾಡಲಾಯಿತು. ಡಾ. ಸಿ.  . ಹಿರೇಮಠ ಇವರು ಶೇಂಗಾ ಹಾಗೂ ಸಿರಿಧಾನ್ಯಗಳ ತಳಿಗಳು ಹಾಗೂ ಬೇಸಾಯ ಕ್ರಮಗಳನ್ನು ವಿವರಿಸಿದರು. ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ರೈತ/ರೈತ ಮಹಿಳೆಯರು ಮತ್ತು ವಿಸ್ತರಣಾ ಕಾರ್ಯಕರ್ತರು ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ವಿಶ್ವ ಮಣ್ಣು ಆರೋಗ್ಯ ದಿನಾಚರಣೆ






ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯಲ್ಲಿ ದಿನಾಂಕ: 05.12.2015 ರಂದು ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಹಾಗೂ ಕೃಷಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ "ವಿಶ್ವ ಮಣ್ಣು ಆರೋಗ್ಯ ದಿನಾಚರಣೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಡಾ. ಆರ್.ಎ. ಬಾಳಿಕಾಯಿ, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಹನುಮನಮಟ್ಟಿ ಇವರು ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಸಾವಯವ ಗೊಬ್ಬರಗಳನ್ನು ಹೆಚ್ಚಾಗಿ ಬಳಸಲು ತಿಳಿಸಿದರು. ಡಾ. ಶಿವರಾಜ, ಜಂಟಿ ಕೃಷಿ ನಿರ್ದೇಶಕರು ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳು, ಕೃಷಿ ಆಯುಕ್ತಾಲಯ, ಬೆಂಗಳೂರು ಇವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ ರೈತರಿಗೆ "ಮಣ್ಣು ಆರೋಗ್ಯ ಚೀಟಿ"ಯನ್ನು ನೀಡುವ ಯೋಜನೆಯ ವಿವರಗಳನ್ನು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ರಮಣದೀಪ ಚೌಧರಿ ಅವರು ಹಾವೇರಿ ಜಿಲ್ಲೆಯಲ್ಲಿ ಒಟ್ಟು 56926 ಮಣ್ಣು ಮಾದರಿಗಳನ್ನು ವಿಶ್ಲೇಷಿಸಬೇಕಿದ್ದು ಮೊದಲನೇ ವರ್ಷ 28463 ಮತ್ತು ಎರಡನೇ ವರ್ಷ 28463 ಮಣ್ಣು ಮಾದರಿಗಳ ವಿಶ್ಲೇಷಣಾ ವರದಿಯನ್ನು ರೈತರಿಗೆ ವಿತರಿಸಬೇಕಾಗಿದೆ ಎಂದು ತಿಳಿಸಿದರು. ಕೃಷಿ ಮಹಾವಿದ್ಯಾಲಯ ಹನುಮನಮಟ್ಟಿಯ ಪ್ರಾಧ್ಯಾಪಕರಾದ ಡಾ. ಎಸ್. ಐ. ಹಾಳಿಕಟ್ಟಿ ಇವರು ಮಣ್ಣಿನ ಫಲವತ್ತತೆ ಹೆಚ್ಚಿಸುವ ವಿಧಾನಗಳನ್ನು ವಿವರಿಸಿದರು. ಕೃಷಿ ಮಹಾವಿದ್ಯಾಲಯ ಹನುಮನಮಟ್ಟಿಯ ಸಹ ಪ್ರಾಧ್ಯಾಪಕರಾದ ಡಾ. ಬಿ.ಆರ್. ಜಗದೀಶರವರು ಮಣ್ಣು ಆರೋಗ್ಯ, ಮಣ್ಣು ಮಾದರಿ ಸಂಗ್ರಹಣೆ ಹಾಗೂ ವಿಶ್ಲೇಷಣೆ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದರು. ಕೇಂದ್ರದ ಕೃಷಿ ತಾಂತ್ರಿಕ ವಿಜ್ಞಾನಿಗಳಾದ ಶ್ರೀ ಡಿ.ಎಸ್.ಎಂ. ಗೌಡ ಇವರು 'ಮಣ್ಣು ಮತ್ತು ನೀರು ಸಂರಕ್ಷಣೆ' ಬಗ್ಗೆ ವಿವರಿಸಿದರು. ಕೇಂದ್ರದ ಮುಖ್ಯಸ್ಥರಾದ ಡಾ. ಸರೋಜನಿ ಕರಕಣ್ಣನವರು ಕೇಂದ್ರದ ಕಾರ್ಯ ಚಟುವಟಿಕೆ ಕುರಿತು ಮಾಹಿತಿ ನೀಡಿದರು.

ಹಾವೇರಿ ಜಿಲ್ಲೆಯ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳಾದ ಡಾ. ರಾಜಶೇಖರ ಐ. ಬಿಜಾಪೂರ, ಜಂಟಿ ಕೃಷಿ ನಿರ್ದೇಶಕರು, ಶ್ರೀ ಸಿ. ಎಂ. ಅಮ್ಮನವರ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ), ಶ್ರೀ ನಟರಾಜು, ಉಪನಿರ್ದೇಶಕರು, ರೇಷ್ಮೆ ಇಲಾಖೆ, ಮತ್ತು ಡಾ. ಹೆಚ್. ಹುಲಿರಾಜ, ಉಪಕೃಷಿ ನಿರ್ದೇಶಕರು ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಜಿಲ್ಲೆಯ ವಿವಿಧ ತಾಲೂಕುಗಳಿಂದ ರೈತ/ರೈತ ಮಹಿಳೆಯರು ಮತ್ತು ವಿಸ್ತರಣಾ ಕಾರ್ಯಕರ್ತರು ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕೃಷಿ ಮೇಳ ಬೆಂಗಳೂರು





ದಿನಾಂಕ 19.11.2015 ರಿಂದ 22.11.2015ರ ವರೆಗೆ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಕೃಷಿ ಮೇಳದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯ ವತಿಯಿಂದ ಕೃಷಿ ಪ್ರದರ್ಶನ ಮಳಿಗೆಯನ್ನು ಹಾಕಲಾಗಿತ್ತು. ಮಳಿಗೆಯಲ್ಲಿ ಕೃಷಿ ವಿಶ್ವ ವಿದ್ಯಾಲಯ ಧಾರವಾಡದಿಂದ ಹೊಸದಾಗಿ ಬಿಡುಗಡೆಯಾದ ಶೇಂಗಾ ತಳಿಗಳು, ಸೋಯಾಅವರೆ, ಜೋಳ, ಗೋಧಿ ಹಾಗೂ ಸಿರಿಧಾನ್ಯಗಳನ್ನು ಪ್ರದರ್ಶಿಸಲಾಯಿತು, ನವಣೆ ಹಾಗೂ ಸಾವೆಯಿಂದ ಮಾಡಿದ ವಿವಿಧ ಮೌಲ್ಯವರ್ಧಿತ ಪದಾರ್ಥಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಬೆಂಗಳೂರು ಹಾಗೂ ಸುತ್ತಲಿನ ಜಿಲ್ಲೆಗಳಿಂದ ಸಾವಿರಾರು ರೈತರು/ ರೈತ ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿವಿಧ ಬೆಳೆಗಳು, ರೋಗ ಮತ್ತು ಕೀಟಗಳ ಬಗ್ಗೆ ಮಾಹಿತಿಯನ್ನು ಪಡೆದರು. ಮೇಳದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಶ್ರೀ ಡಿ.ಎಸ್.ಎಂ. ಗೌಡ, ಡಾ. ಎಸ್. ಎ. ಅಷ್ಟಪುತ್ರೆ ಹಾಗೂ ಡಾ. ಅರ್ಚನಾ ಬಿ. ರವರು ಭಾಗವಹಿಸಿದ್ದರು.

## ಗೋವಿನ ಜೋಳದ ಬೆಳೆಯ ಕ್ಷೇತ್ರೋತ್ಸವ



ದಿನಾಂಕ 15–10–2015 ರಂದು ಬ್ಯಾಡಗಿ ತಾಲ್ಲೂಕಿನ ಬುಡಪನಹಳ್ಳಿ ಗ್ರಾಮದಲ್ಲಿ ಲೂಯಿಸ್ ಡ್ರೈಫೆನ್ ಸ್ವಯಂ ಸೇವಾ ಸಂಸ್ಥೆಯ ಸಹಯೋಗದೊಂದಿಗೆ ಗೋವಿನ ಜೋಳ ಬೆಳೆಯಲ್ಲಿ ಕ್ಷೇತ್ರೋತ್ಸವ ಮತ್ತು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೃ.ವಿ.ಕೇಂದ್ರದ ವಿಜ್ಞಾನಿ ಶ್ರೀ ಡಿ.ಎಸ್.ಎಂ. ಗೌಡ ಅವರು ಕೃಷಿಯಲ್ಲಿ ಆಧುನಿಕ ತಾಂತ್ರಿಕತೆಗಳ ಬಗ್ಗೆ ವಿವರಿಸಿದರು. ಸುಮಾರು 50 ಜನ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ತೊಗರಿ ಬೆಳೆ ನಾಟಿ ಪದ್ಧತಿ ಕ್ಷೇತ್ರೋತ್ಸವ





ಹನುಮನಮಟ್ಟಿಯ ಕೃಷಿ ಮಹಾವಿದ್ಯಾಲಯ, ಹಾವೇರಿಯ ನಬಾರ್ಡ ಸಂಸ್ಥೆ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ ಇವರ ಸಹಯೋಗದೊಂದಿಗೆ ರಾಣೇಬೆನ್ನೂರು ತಾಲ್ಲೂಕಿನ ಕುಪ್ಪೆಲೂರು ಗ್ರಾಮದ ಪ್ರಗತಿ ಪರ ರೈತ ಶ್ರೀ ರಾಮಪ್ಪ ಬಸಪ್ಪ ಹರಿಹರ ಇವರ ಜಮೀನಿನಲ್ಲಿ ನಾಟಿ ಪದ್ಧತಿಯಲ್ಲಿ ಬೆಳೆದ (ಬಿ.ಎಸ್.ಎಮ್.ಆರ್–736) ತೊಗರಿ ಬೆಳೆ ಕ್ಷೇತ್ರೋತ್ಸವವನ್ನು 2015 ರ ಡಿಸೆಂಬರ್ 21 ರಂದು ಹಮ್ಮಿಕೊಳ್ಳಲಾಗಿತ್ತು. ಪ್ರಭಾರಿ ಡೀನ್ (ಕೃಷಿ) ರಾದ ಡಾ. ಎಸ್.ಆಯ್. ಹಾಲಿಕಟ್ಟಿ ಕ್ಷೇತ್ರೋತ್ಸವವನ್ನು ಉದ್ಘಾಟಿಸಿ, ವೈಜ್ಞಾನಿಕ ಹಾಗೂ ಹೊಸ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ನಾಟಿ ಪದ್ಧತಿಯಲ್ಲಿ ತೊಗರಿ ಬೆಳೆಯುವುದರಿಂದ ಎಕರೆಗೆ 8–10 ಕ್ವಿಂಟಲ್ ಇಳುವರಿ ಪಡೆಯಬಹುದು ಮತ್ತು ಬೆಳೆಕಾಳುಗಳನ್ನು ಬೆಳೆಯುವುದರಿಂದ ಭೂಮಿಯ ಫಲವತ್ತತೆ ಹೆಚ್ಚಿಸಬಹುದೆಂದು ತಿಳಿಸಿದರು. ಮುಖ್ಯ ಅತಿಥಿಗಳಾದ ಹಾವೇರಿ ನಬಾರ್ಡ್ ಬ್ಯಾಂಕಿನ ಅಭಿವೃದ್ಧಿ ವ್ಯವಸ್ಥಾಪಕ ಶ್ರೀ ಎಮ್.ಎನ್. ವಿದ್ಯಾಗಣೇಶ, ತೊಗರಿ ಬೆಳೆ ನಾಟಿ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಹೆಚ್ಚಿನ ಕ್ಷೇತ್ರದಲ್ಲಿ ಕೈಗೊಳ್ಳಲು ಹಾಗೂ ರೈತರಿಗೆ ಅನುಕೂಲವಾಗುವ ತಾಂತ್ರಿಕತೆಗಳ ಪ್ರಸರಣಕ್ಕೆ ಬ್ಯಾಂಕ್ ಹಣಕಾಸು ನೆರವು ನೀಡುವುದಾಗಿ ತಿಳಿಸಿದರು. ಪ್ರಧಾನ ಸಂಶೋಧಕ ಡಾ. ಎಂ.ವಿ. ನಾಗರಾಜ ಎಲ್ಲರನ್ನು ಸ್ವಾಗತಿಸಿ, ನಾಟಿ ಪದ್ಧತಿ ತೊಗರಿ ಬೇಸಾಯ ತಾಂತ್ರಿಕತೆ ಬಗ್ಗೆ ತಿಳಿಸಿದರು. ಡಾ. ಟಿ. ಗಣಪತಿ, ಡಾ. ಡಿ.ಎಸ್. ಮಲ್ಲಿಕಾರ್ಜುನಪ್ಪಗೌಡ ಹಾಗೂ ಕುಪ್ಪೆಲೂರು ಆರ್.ಎಸ್.ಕೆ., ಕೃಷಿ ಅಧಿಕಾರಿ ಶ್ರೀಮತಿ ಕುಲಕರ್ಣಿ ಭಾಗವಹಿಸಿದ್ದರು. ಸುಮಾರು 180 ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಜೈ ಕಿಸಾನ ಜೈ ವಿಜ್ಞಾನ ದಿವಸ





ಕೇಂದ್ರದ ವತಿಯಿಂದ ದಿನಾಂಕ 23.12.2015 **ಜೈ ಕಿಸಾನ ಜೈ ವಿಜ್ಞಾನ ದಿವಸವನ್ನು** ಸಹಾಯಕ ಕೃಷಿ ನಿರ್ದೇಶಕರು ಸವಣೂರು ಹಾಗೂ ಹಾವೇರಿಯಲ್ಲಿ ಅಚರಿಸಲಾಯಿತು. ಸವಣೂರು ತಾಲ್ಲೂಕಿನಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ವೀರಭದ್ರರೆಡ್ಡಿ ಹಾಗೂ ಹಾವೇರಿಯಲ್ಲಿ ಶ್ರೀಕರಿಯಲ್ಲಪ್ಪರವರು ಕಾರ್ಯಗಾರವನ್ನು ಉದ್ಘಾಟಿಸಿ ಜೈ ಕಿಸಾನ ದಿವಸದ ಆಚರಣೆಯ ಬಗ್ಗೆ ವಿವರಿಸಿದರು. ಕೇಂದ್ರದ ವತಿಯಿಂದ ಡಾ. ಅರ್ಚನಾ ಬಿ. ಹಾಗೂ ಡಾ. ಸಿ. . ಹಿರೇಮಠ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಕೇಂದ್ರದಿಂದ ದೊರೆಯುವ ತಾಂತ್ರಿಕ ಸೇವೆಗಳ ಕುರಿತು ರೈತರಿಗೆ ಅರಿವು ಮೂಡಿಸಿದರು. ಸವಣೂರಿನ ಪ್ರಗತಿ ಪರ ರೈತರಾದ ಶ್ರೀ .ಎಸ್. ಪಾಟೀಲ್, ಶ್ರೀ . . ರೆಡ್ಡಿ ಹಾಗೂ ಶ್ರೀ ಎ.ಕೆ ಹನುಮಶೆಟ್ಟರ್ ಭಾಗವಹಿಸಿದ್ದರು. ಹಾವೇರಿಯ ಉಪ ಕೃಷಿ ನಿರ್ದೇಶಕರಾದ ಶ್ರೀ ಹುಲಿರಾಜ ಹಾಗೂ ಶ್ರೀ ಪ್ರಕಾಶರವರು ಭಾಗವಹಿಸಿ ರೈತರಿಗೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ವಿವರಿಸಿದರು. ಸವಣೂರು ಮತ್ತು ಹಾವೇರಿ ಸುತ್ತಮುತ್ತ ಗ್ರಾಮಗಳಿಂದ ಸುಮಾರು 350 ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಮುಂಚೂಣಿ ಪ್ರಾತ್ಯಕ್ಷತಾ ತಾಕಿಗೆ ವಿಜ್ಞಾನಿಗಳ ಭೇಟಿ



ಮುಗಳಿ ಗ್ರಾಮದ ಸಾವೆ ಕ್ಷೇತ್ರಗಳಿಗೆ ಡಾ. ಸರೋಜನಿ ಜೆ.ಕೆ ಹಾಗೂ ಡಾ. ಅರ್ಚನಾ ಭಜಂತ್ರಿ ಭೇಟಿ ನೀಡಿ ರೈತರಿಗೆ ಸಿರಿಧಾನ್ಯಗಳ ಮಹತ್ವ ಹಾಗೂ ಪೌಷ್ಠಿಕತೆ ಕುರಿತು ತರಬೇತಿ ನೀಡಿದರು.

## ಗುಚ್ಛ ಪ್ರಾತ್ಯಕ್ಷಿಕೆ





ರಾಷ್ಟ್ರೀಯ ಆಹಾರ ಸಂರಕ್ಷಣೆ ಯೋಜನೆಯಡಿಯಲ್ಲಿ ಹಿಂಗಾರು –2015 ರಲ್ಲಿ ಜೆ.ಜಿ.–11 ಕಡಲೆ ಬೆಳೆ ತಳಿಯ 30 ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಹಾವೇರಿ ತಾಲೂಕಿನ ನೆಗಳೂರು ಮತ್ತು ಹಾಲಗಿ ಗ್ರಾಮಗಳಲ್ಲಿ ಕೈಗೊಳ್ಳಲಾಗಿತ್ತು. ಕೇಂದ್ರದ ವಿಜ್ಞಾನಿ ಡಾ. ಎಸ್. ಎ. ಅಷ್ಟಪುತ್ರೆಯವರು ಭೇಟಿ ನೀಡಿ ಮಾಹಿತಿ ನೀಡಿದರು.

## ಕಾರ್ಯಾಗಾರಗಳಲ್ಲಿ ಭಾಗವಹಿಸುವಿಕೆ

| ವಿಜ್ಞಾನಿ | ವಿಷಯ | ದಿನಾಂಕ (ಅವಧಿ) | ಸ್ಥಳ |
|---|---|---|---|
| ಡಾ. ಸರೋಜನಿ ಜೆ.ಕೆ | ಫಾರ್ಮರ್ ಪ್ರೊಡ್ಯುಸರ್ ಆರ್ಗನೈಸೇಷನ್ | 29.10.2015 ರಿಂದ 30.10.2015 (2 ದಿನಗಳು) | ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ (ಗದಗ) |
| ಡಾ. ಅರ್ಚನಾ ಭಜಂತ್ರಿ | ಫಾರ್ಮರ್ ಪ್ರೊಡ್ಯುಸರ್ ಆರ್ಗನೈಸೇಷನ್ | 29.10.2015 ರಿಂದ 30.10.2015 (2 ದಿನಗಳು) | ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ (ಗದಗ) |
| ಡಾ. ಸರೋಜನಿ ಜೆ.ಕೆ | ಫಾರ್ಮರ್ ಪ್ರೊಡ್ಯುಸರ್ ಆರ್ಗನೈಸೇಷನ್ | 09.12.2015 ರಿಂದ 11.12.2015 (3 ದಿನಗಳು) | ನಾರ್ಮ್, ಹೈದರಬಾದ |
| ಡಾ.ಎಸ್.ಎ. ಅಷ್ಟಪುತ್ರೆ | ಸ್ಟ್ರೆಂಥನಿಂಗ್ ದ ಮ್ಯಾನೆಜ್‌ಮೆಂಟ್ ಆ್ಯಂಡ್ ಮಾನಿಟರಿಂಗ್ ಆಫ್ ಕನಫೈನಡ್ ,ೀಲ್ಡ ಟ್ರಯಲ್ಸ ಆಫ್ ರೆಗ್ಯೂಲೇಟೆಡ್ ಜಿಇ ಕ್ರಾಪ್ಸ್ | 14.12.2015 (1 ದಿನ) | ಕೃ.ವಿ.ವಿ. ಧಾರವಾಡ |

ಅಕ್ಟೋಬರ್ 19 ರಂದು ದ್ವೈಮಾಸಿಕ ಕಾರ್ಯಾಗಾರವನ್ನು ಕುನ್ನೂರುನಲ್ಲಿ ಹಮ್ಮಿಕೊಳ್ಳಲಾಗಿದ್ದು ತಜ್ಞರು ಭಾಗವಹಿಸಿ ವಿಸ್ತರಣಾ ಕಾರ್ಯಕರ್ತರಿಗೆ ಪಾಕ್ಷಿಕ ಸಲಹೆಗಳನ್ನು ನೀಡಿದರು.


ಸಂಪಾದಕರು ಹಾಗೂ ಪ್ರಕಾಶಕರು : **ಡಾ. ಸರೋಜನಿ ಜೆ ಕರಕಣ್ಣವರ**
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ–581115

ಸಹ ಸಂಪಾದಕರು : **ಶ್ರೀಮತಿ ಗೀತಾ ಎಸ್. ತಾಮಗಳೆ**

ಲೇಖಕರು : **ಶ್ರೀ. ಡಿ. ಎಸ್. ಮಲ್ಲಿಕಾರ್ಜುನಪ್ಪ ಗೌಡ, ಡಾ. ಎಸ್. ಎ. ಅಷ್ಟಪುತ್ರೆ, ಡಾ. ಅರ್ಚನಾ ಮತ್ತು ಡಾ. ಚನ್ನಯ್ಯ . ಹಿರೇಮಠ**

ಅಕ್ಷರ ಜೋಡಣೆ ಮತ್ತು ವಿನ್ಯಾಸ : **ಶ್ರೀ ಉಳವಪ್ಪ ಶಿವೋಜಿ,** ಡಿಟಿ , ಘಟಕ ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ
**ಕು. ರೇಖಾ ಕೆ. ಎನ್.,** ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ–58111



ಇಂದ,
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ
ಹನುಮನಮಟ್ಟಿ –581135 ಜಿ: ಹಾವೇರಿ
ದೂರವಾಣಿ : 08373–253524
ಮಿಂಚಂಚೆ : kvk_haveri@rediffmail.com
ವೆಬ್‌ಸೈಟ್ : www.kvkhaveri.org


ಗೆ,

ತೆರೆದ ಅಂಚೆ